## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\8336\2015\ಸನಿಕಾಸ-2 DRE-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 3.10.2016

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ (1)ಶ್ರೀ.ಶಂಭುಲಿಂಗಯ್ಯ ತಹಶೀಲ್ದಾರ್ ಗ್ರೇಡ್-1 ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (2) ಶ್ರೀ.ನಾರಸೀಗೌಡ, ತಾಲ್ಲೂಕು ಸರ್ವೆಯರ್, ತಾಲ್ಲೂಕು ಕಛೇರಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (3)ಶ್ರೀ.ಹೆಚ್.ಎ.ರಾಮಕೃಷ್ಣಮೂರ್ತಿ, ತಹಶೀಲ್ದಾರ್ ಗ್ರೇಡ್ -2, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ, ಮತ್ತು (4) ಶ್ರೀ. ಟಿ.ಸಿ.ಜಯಪ್ರಕಾಶ್, ರಾಜಸ್ವ ನಿರೀಕ್ಷಕರು, ಯಡಿಯೂರು ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರು ಕರ್ತವ್ಯ ಲೋಪ/ ದುರ್ವತ೯ನೆ ಎಸಗಿರುವ ಬಗ್ಗೆ.

*******

ಶ್ರೀ.ಎಸ್.ಎಂ.ತಮ್ಮಣ್ಣಗೌಡ, ನಂ: 44, 10ನೇ ಅಡ್ಡ ರಸ್ತೆ, ಪರಿಮಳನಗರ, ನಂದಿನಿ ಲೇಔಟ್, ಬೆಂಗಳೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1)ಶ್ರೀ.ಶಂಭುಲಿಂಗಯ್ಯ ತಹಶೀಲ್ದಾರ್ ಗ್ರೇಡ್-1 ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (2) ಶ್ರೀ.ನಾರಸೀಗೌಡ, ತಾಲ್ಲೂಕು ಸರ್ವೆಯರ್, ತಾಲ್ಲೂಕು ಕಛೇರಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (3)ಶ್ರೀ.ಹೆಚ್.ಎ.ರಾಮಕೃಷ್ಣಮೂರ್ತಿ, ತಹಶೀಲ್ದಾರ್ ಗ್ರೇಡ್ -2, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ, ಮತ್ತು (4) ಶ್ರೀ. ಟಿ.ಸಿ.ಜಯಪ್ರಕಾಶ್, ರಾಜಸ್ವ ನಿರೀಕ್ಷಕರು, ಯಡಿಯೂರು ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಕುಣಿಗಲ್ ತಾಲ್ಲೂಕು ಬಿರಗಾನಹಳ್ಳಿ ಗ್ರಾಮದ ಸ. ನಂ: 44 ಇದು ಸರ್ಕಾರಿ ಗೋಮಾಳದ ಜಮೀನಾಗಿರುತ್ತದೆ. ಇದರ ಪಕ್ಕದಲ್ಲಿ ಕೆ.ಎಸ್. ಕೆ.ಎಸ್.ತೋಂಟದಾರ್ಯ ತಂದೆ ಸಿದ್ದಲಿಂಗಯ್ಯ ಇವರ ಸ. ನಂ: 28/2 ನಿವೇಶನ ಇದ್ದು ಇದರಲ್ಲಿ ವಾಣಿಜ್ಯ ಉದ್ದೇಶಕ್ಕೆ ಮಳಿಗೆಗಳನ್ನು, ಕಲ್ಯಾಣ ಮಂಟಪ ಕಟ್ಟಿದ್ದಾರೆ. ಆದರೆ ಇವರು ತಮ್ಮ ಕಲ್ಯಾಣ ಮಂಟಪಕ್ಕೆ ಹೋಗಲು ಪಶ್ಚಿಮ ದಿಕ್ಕಿನಲ್ಲಿರುವ ಸರ್ಕಾರಿ ಗೋಮಾಳ ಜಮೀನು ವಿಸ್ತೀರ್ಣ 17.5 ಗು., ಜಮೀನನ್ನು ಒತ್ತುವರಿ ಮಾಡಿರುತ್ತಾರೆ. ಈ ಒತ್ತುವರಿಯನ್ನು ಅಳತೆ ಮಾಡಿ ತೆರವುಗೊಳಿಸಲು ಎದುರುದಾರರಿಗೆ ಅರ್ಜಿ ಸಲ್ಲಿಸಿದಾಗ ಅವರು ಕೆ.ಎಸ್.ತೋಂಟದಾರ್ಯ ರವರೊಂದಿಗೆ ಶಾಮೀಲಾಗಿ ಯಾವುದೇ ಕ್ರಮಕೈಗೊಳ್ಳದೆ ಕರ್ತವ್ಯಲೋಪವೆಸಗಿದ್ದಾರೆ. ಆದ್ದರಿಂದ ಈ ಬಗ್ಗೆ ತನಿಖೆ ನಡೆಸಿ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಸರ್ಕಾರಿ ಗೋಮಾಳದ ಜಮೀನನ್ನು ಮರಳಿ ಪಡೆಯಬೇಕೆಂದು ದೂರು ಸಲ್ಲಿಸಿದ್ದಾರೆ.

3) ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ದಿ: 3.6.2014ರಂದು ಆರ್.ಐ ರವರ ವರದಿ ಪಡೆಯಲಾಗಿ ಒತ್ತುವರಿದಾರರದ ಕೆ.ಎಸ್.ತೋಂಟದಾರ್ಯ ರವರು ಸ. ನಂ: 44ರಲ್ಲಿ ಕಟ್ಟಿದ ಹಂಗಾಮಿ ಕಾಂಪೌಡ್‌ಅನ್ನು ಸ್ವಯಂ ಪ್ರೇರಿತವಾಗಿ ತೆರವುಗೊಳಿಸಿದ್ದಾರೆ. ತಾವು ಖುದ್ದಾಗಿ ಸ್ಥಳ ಭೇಟಿ ಮಾಡಿ ಒತ್ತುವರಿ ತೆರವುಗೊಳಿಸಿದ ಬಗ್ಗೆ ಖಚಿತ ಪಡಿಸಿಕೊಂಡಿದ್ದಾರೆ. ಒತ್ತುವರಿ ಜಮೀನನ್ನು ಮಂಜೂರು ಮಾಡುವ ಅಧಿಕಾರ ತನ್ನ ವ್ಯಾಪ್ತಿಗೆ ಬರುವುದಿಲ್ಲ ಆದ್ದರಿಂದ ತಾನು ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲ ಕಾರಣ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4) ಎದುರುದಾರ ನಂ:2 ರವರು ತಮ್ಮ ಆಕ್ಷೇಪಣೆಯಲ್ಲಿ ಎದುರುದಾರ ನಂ: 1 ರವರ ಆದೇಶದಂತೆ ತಾನು ಸ್ಥಳಕ್ಕೆ ಹಾಜರಾಗಿ ಜಮೀನನ್ನು ಅಳತೆ ಮಾಡಿ ಗ್ರಾಮಸ್ಥರು ಹಾಗೂ ಅರ್ಜಿದಾರರ ಸಮಕ್ಷಮ ಮಹಜರ್ ಪಡೆದು ಕಛೇರಿಯ ಉಪಯೋಗಕ್ಕಾಗಿ ನಕ್ಷೆ ಮತ್ತು ವಿಸ್ತೀರ್ಣವನ್ನು ಕಡತಕ್ಕೆ ಲಗತ್ತಿಸಲಾಗಿದೆ ಆದ್ದರಿಂದ ತಾನು ಯಾವುದೇ ಆಮಿಶಕ್ಕೆ ಒಳಗಾಗಿರುವುದಿಲ್ಲ ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5) ಎದುರುದಾರ ನಂ:3 ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ: 5.1.2015ರಂದು ಇಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದು ಅದಕ್ಕೂ ಪೂರ್ವದಲ್ಲಿ ಈ ಪ್ರಕರಣ ನಡೆದಿರುವುದರಿಂದ ತನಗೂ ಹಾಗೂ ಈ ಪ್ರಕರಣಕ್ಕೆ ಸಂಬಂಧವಿಲ್ಲ ಅಂತ ತಿಳಿಸಿದ್ದಾರೆ.

6) ಎದುರುದಾರ ನಂ:4 ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ಸರ್ಕಾರಿ ಜಮೀನನ್ನು ಖಾಸಗಿಯವರಿಗೆ ಮಂಜೂರು ಮಾಡಲು ವರದಿ ಸಲ್ಲಿಸಿರುವುದಿಲ್ಲ ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

7) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) "ಬಿರಗಾನಹಳ್ಳಿ ಗ್ರಾಮದಲ್ಲಿರುವ ಸ. ನಂ: 44ರ **ಪಹಣಿಯನ್ನು ಹಾಜರುಪಡಿಸಿದ್ದು** ಅದರಲ್ಲಿ **ಕ್ಷೇತ್ರ** 20ಎ., 23ಗು., **ಸರ್ಕಾರಿ ಗೋಮಾಳ ಅಂತ ನಮೂದಾಗಿರುತ್ತದೆ.** ಸ. ನಂ: 28/2 ಇದು ಕೆ.ಎಸ್.ತೊಂಟದಾರ್ಯ ಇವರ ಹೆಸರಿನಲ್ಲಿ ಇರುತ್ತದೆ.

ಆ) ದೂರುದಾರರು ಈ ಪೂರ್ವದಲ್ಲಿ ಜಿಲ್ಲಾಧಿಕಾರಿಗಳು ತುಮಕೂರು ಇವರಿಗೆ ಇದೇ ವಿಷಯವಾಗಿ ಕೆ.ಎಸ್.ತೊಂಟದಾರ್ಯ ಇವರ ವಿರುದ್ಧ ದೂರು ಸಲ್ಲಿಸಿದಾಗ ಜಿಲ್ಲಾಧಿಕಾರಿಗಳು ವಿಶೇಷ ಭೂಸ್ವಾಧೀನಧಿಕಾರಿ ತುಮಕೂರು  ರಾಯದುರ್ಗ  ದಾವಣಗೆರೆ ರೈಲ್ವೇಯೋಜನೆ ತುಮಕೂರು ಇವರನ್ನು ಈ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ನೇಮಿಸಿದ್ದು ಇರುತ್ತದೆ. ಇವರು ದಿ: 4.2.2015ರಮದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ವರದಿಯಲ್ಲಿ ಸ. ನಂ: 44ರಲ್ಲಿ 8.5 ಗು., ಜಮೀನನ್ನು ಕೆ.ಎಸ್.ತೊಂಟದಾರ್ಯ ರವರು

ಒತ್ತುವರಿ ಮಾಡಿರುವ ಜಾಗ ತೆರೆವುಗೊಂಡಿರುವುದು ಕಂಡುಬಂದಿರುತ್ತದೆ. ಆದರೆ ಸರ್ಕಾರದ ವಶಕ್ಕೆ ಪಡೆದು ತಂತಿಬೇಲಿ ನಿರ್ಮಿಸಿರುವುದು ಕಂಡುಬಂದಿರುವುದಿಲ್ಲ. ಈ ತನಿಖಾಧಿಕಾರಿಗಳು ದಿ: 22.1.2015ರಂದು ಕುಣಿಗಲ್ ತಾಲ್ಲೂಕು ಸರ್ವೆಯರ್, ಉಪ ತಹಶೀಲ್ದಾರ್, ಸಮಕ್ಷಮ ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸಿದ್ದು ಅದರಲ್ಲಿ ಮೇಲಿನಂತೆ ಅಭಿಪ್ರಾಯಪಟ್ಟಿದ್ದಾರೆ. ಇವರೇ ಮುಂದುವರೆದು ತಮ್ಮ ವರದಿಯಲ್ಲಿ ಉಚ್ಚನ್ಯಾಯಾಲಯದ ಆದೇಶ ಹಾಗೂ ಸರ್ಕಾರಿ ಸುತ್ತೋಲೆ ಪ್ರಕಾರ ಸರ್ಕಾರಿ ಗೋಮಾಳ ಜಾಗವನ್ನು ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡುವ ಅಧಿಕಾರ ಇರುವುದಿಲ್ಲ. ಈ ತನಿಖಾಧಿಕಾರಿಗಳು ಈ ಪ್ರಕರಣವಲ್ಲದೆ ಎದುರುದಾರ ನಂ: 1 ರವರ ವಿರುದ್ಧ ಬೇರೆ ಬೇರೆ ಒಟ್ಟು 4 ದೂರುಗಳ ಬಗ್ಗೆ ತನಿಖೆ ಕೈಗೊಂಡಿದ್ದು ಎಲ್ಲದರಲ್ಲಿಯೂ ಎದುರುದಾರರು ಕರ್ತವ್ಯ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಅಭಿಪ್ರಾಯಪಟ್ಟಿದ್ದಾರೆ.

ಇ) ದಿ: 7.11.2014 ರಂದು ಎದುರುದಾರ ನ: 1 ರವರು ಸ. ನಂ: 44 ರಲ್ಲಿ 8.5 ಗು., ಪ್ರದೇಶವನ್ನು ಕೆ.ಎಸ್.ತೊಂಟದಾರ್ಯ ಅವರು ನಡೆಸುತ್ತಿರುವ ಶ್ರೀ.ಜಗದ್ಗುರು ತೊಂಟದಾರ್ಯ ಎಂಟರ್ ಪ್ರೈಸಸ್ ಸಂಸ್ಥೆಗೆ ಮಂಜೂರಾತಿ ನೀಡುವಂತೆ ಕೋರಿ ಉಪ ವಿಭಾಗಾಧಿಕಾರಿಗಳು ತುಮಕೂರು ಇವರಿಗೆ ಪತ್ರ ಬರೆದಿರುವ ದಾಖಲೆ ಲಭ್ಯವಿರುತ್ತದೆ. ಎದುರುದಾರ ನಂ:2 ರಿಂದ 4 ರವರು ಕೆ.ಎಸ್.ತೊಂಟದಾರ್ಯ ಇವರು ಅತಿಕ್ರಮಿಸಿಕೊಂಡಿರುವ ಜಮೀನನ್ನು ಸರ್ವೆ ಮಾಡಿದ್ದು ಆದರೆ ಅವರು ಅತಿಕ್ರಮಿಸಿದ್ದಾರೆಂದು ತಮ್ಮ ವರದಿಯಲ್ಲಿ ಉಲ್ಲೇಖಿಸಿರುವುದಿಲ್ಲ.

ಈ) ಕರ್ನಾಟಕ ಸರ್ಕಾರದ ಸುತ್ತೋಲೆ ಸಂ: ಕಂಇ 160 ಎಲ್.ಜಿ.ಪಿ 2013 ದಿ: 27.5.2013ರಂದು ಹೊರಡಿಸಿದ ಈ ಸುತ್ತೋಲೆ ಪ್ರಕಾರ ಸರ್ಕಾರಿ ಭೂಮಿಗಳನ್ನು ಯಾವುದೇ ಖಾಸಗಿ ವ್ಯಕ್ತಿಗೆ ಮಂಜೂರು ಮಾಡುವಂತಿಲ್ಲ ಹಾಗೊಂದು ವೇಳೆ ಯಾರಾದರೂ ಒತ್ತುವರಿ ಮಾಡಿಕೊಂಡಿದ್ದರೆ ಅವರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯಿದೆ 1964 ಕಲಂ 192ಎ ಅಡಿಯಲ್ಲಿ ಮೊಕದ್ದಮ್ಮೆಗಳನ್ನು ದಾಖಲಿಸುವುದು ಅಂತ ತಿಳಿಸಿದ್ದಾರೆ.

ಉ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರ ನಂ: 3ರವರು ವಾಣಿಜ್ಯ ಕಟ್ಟಡಗಳಿಗೆ ರಸ್ತೆ ಮಂಜೂರು ಮಾಡಲು 3-4 ಬಾರಿ ಸ್ಥಳ ಪರಿಶೀಲನೆ ಮಾಡಿ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಸಹಕರಿಸಿರುತ್ತಾರೆಂದು ಆಪಾದಿಸಿರುತ್ತಾರೆ. ಆದ್ದರಿಂದ ಎದುರುದಾರ ನಂ:3 ರವರು ಸಹ ತಮ್ಮ ಕರ್ತವ್ಯ ವಹಿಸಿಕೊಂಡ ನಂತರ ವಿಶೇಷ ಮುತುವರ್ಜಿ ವಹಿಸಿ ಕೆ.ಎಸ್.ತೊಂಟದಾರ್ಯ ರವರಿಗೆ ಸಹಾಯಮಾಡುವ ಒಲವು ತೋದಿದ್ದಾರೆಂದು ಕಂಡುಬರುತ್ತದೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಕರ್ತವ್ಯದಲ್ಲಿ ಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಊ) ಎದುರುದಾರ ನಂ:4 ರವರು ದಿ: 24.9.2015ರಂದು ಮೃತರಾಗಿದ್ದಾರೆಂದು ಪೊಲೀಸ್ ನಿರೀಕ್ಷಕರು ಕರ್ನಾಟಕ ಲೋಕಾಯುಕ್ತ ತುಮಕೂರು ರವರು ವರದಿ ನೀಡಿದ್ದು ಆದ್ದರಿಂದ ಅವರನ್ನು ಪ್ರಕರಣದಿಂದ ಕೈಬಿಡಲಾಗಿದೆ.

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು 1 ರಿಂದ 3ನೇ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1 ರಿಂದ 3ನೇ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

10. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 3ನೇ ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

11. 1 ರಿಂದ 3ನೇ ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ

ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1 ರಿಂದ 3ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ 1 ರಿಂದ 3ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸ ಬೇಕೆಂದೂ ಕೋರಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 31/1/'16.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.